**ಓ ಎಸ್ ನಂಃ 199/2017**

**ಪಿ. ಡಬ್ಲ್ಯೂ ಃ 2**

**ದಿಃ 08.02.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.**

**ಪಾಟೀ ಸವಾಲು ಃ ಪ್ರತಿವಾದಿಗಳ ಪರ ಶ್ರೀ ಜಿ ಪಿ ವಕೀಲರಿಂದ ಃ**

ದಿನಾಂಕ ಃ20.01.1968 ರ ಕ್ರಯಪತ್ರದ ದೃಢೀಕೃತ ಪತ್ರವನ್ನು ತೆಗೆದುಕೊಳ್ಳಲು ನಮ್ಮ ಲಾಯರ್ ಅರ್ಜಿ ಕೊಟ್ಟಿದ್ದರು. ಆ ರೀತಿಯ ದಾಖಲೆ ಲಭ್ಯವಿಲ್ಲ ಎಂದು ಹಿಂಬರಹ ಕೊಟ್ಟಿದ್ದಾರೆ.ಸಾಕ್ಷಿಗೆ ದಿನಾಂಕ ಃ 20.01.1968 ರ ಮೂಲ ಕ್ರಯಪತ್ರವನ್ನು ತೋರಿಸಿದಾಗ ಅದನ್ನು ನೋಡಿದರೆ ನನಗೆ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ. ಆ ದಾಖಲೆಗೆ ಮತ್ತು ಸಾಕ್ಷಿಗೆ ತೋರಿಸಿದ ದೃಡೀಕರಣ ಪತ್ರಕ್ಕೆ ಹೊಂದಾಣಿಕೆ ಅಗುವುದಿಲ್ಲ ಎಂದು ಸಾಕ್ಷಿ ಹೇಳುತ್ತಾರೆ. 1968 ರಲ್ಲಿ ಯಾವ ರೀತಿ ನೋಂದಣಿ ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ಮುರಳಿಯಪ್ಪ ಇವರಿಗೆ ಮರಿಹುಲಿಯಪ್ಪ ಎಂದು ಕೂಡ ಕರೆಯುತ್ತಿದ್ದರು ಎಂದರೆ ಸರಿ. ಅವರು ನನಗೆ ದೊಡ್ಡಪ್ಪನಾಗಬೇಕು. ಕಾಳಿಂಗಯ್ಯ ನಮ್ಮ ತಾತನಾಗಬೇಕು. ಕಾಳಿಂಗಯ್ಯ ಅವರ ಮಗ ಲಕ್ಕಪ್ಪ , 2ನೆ ಮಗ ಮರಿಹುಲಿಯಪ್ಪ ,3ನೆ ಮಗ ಭದ್ರಯ್ಯ ಮತ್ತು ಸೀತಾರಾಮಯ್ಯ ಇವರುಗಳು ನಮ್ಮ ತಾತನ ಮಕ್ಕಳೆಂದರೆ ಸರಿ. ಇವರು ಕೇತೋಹಳ್ಳಿ ಗ್ರಾಮದ ವಾಸಿಗಳೆಂದರೆ ಸರಿ. ಅವರಿಗೆ ಸ.ನಂ. 55/10 ರಲ್ಲಿ 21 ಗುಂಟೆ ಜಮೀನಿತ್ತು ಎಂದರೆ ಸರಿ. ಪೂರ್ವಕ್ಕೆ ಮೂರ್ತಿರಾಯರ ಜಮೀನು, ಪಶ್ಚಿಮಕ್ಕೆ ವೆಂಕಟಪ್ಪ ಇವರ ಜಮೀನು , ಉತ್ತರಕ್ಕೆ ಶಿವರುದ್ರಯ್ಯ ಇವರ ಜಮೀನು ಮತ್ತು ದಕ್ಷಿಣಕ್ಕೆ ದ್ಯಾವಮ್ಮ ಇವರ ಜಮೀನಿನ ಚೆಕ್ ಬಂದಿಯ ಮದ್ಯದ ಜಮೀನನ್ನು ದಿನಾಂಕಃ 20.01.1968 ರಂದು ನನ್ನ ತಂದೆ ಮತ್ತು ಅವರ ಸಹೋದರರು ಮತ್ತು ನನ್ನ ತಾತ ಸೇರಿ ಶಿವರುದ್ರಯ್ಯ ಇವರಿಗೆ ಕ್ರಯಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಮರಿಹುಲಿಯಪ್ಪ ಇವರು ಹೆಬ್ಬೆಟ್ಟಿನ ರುಜು ಮಾಡುವುದಿಲ್ಲ, ಅವರು ಸಹಿ ಮಾಡುತ್ತಾರೆ, ಅವರು ನನ್ನ ತಂದೆ ಮತ್ತು ನನ್ನ ತಾತ ಇವರು ಸಹಿ ಮಾಡಿದ ಪತ್ರಗಳು ನನ್ನ ಬಳಿ ಇವೆ, ಅವುಗಳನ್ನು ಕೊಡುತ್ತೇನೆ ಎಂದು ಸಾಕ್ಷಿ ಹೇಳುತ್ತಾರೆ. ಭದ್ರಯ್ಯ ಮತ್ತು ಸೀತಾರಾಮಯ್ಯ 1968 ರಲ್ಲಿ ಮೈನರ್ ಆಗಿದ್ದರು ಎಂದರೆ ಸರಿ. ಅವರೆಲ್ಲರ ಪರವಾಗಿ ನಮ್ಮ ತಾತ ಪತ್ರ ಬರೆದುಕೊಟ್ಟಿದ್ದಾರೆ ಎಂದರೆ ಸರಿಯಲ್ಲ. 1968 ರಲ್ಲಿ ನಮ್ಮ ತಂದೆ, ವಾದಿ 1 ರವರು ಹಾಗೂ ನಮ್ಮ ತಾತ ಸೇರಿ ಕ್ರಯಪತ್ರ ಬರೆದುಕೊಟ್ಟಿದ್ದರೂ ಸಹ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚನ್ನರಾಯಪ್ಪ ಮತ್ತು ಗುರುಸ್ವಾಮಿಯವರು ಕೇತೋಹಳ್ಳಿಯವರೆಂದರೆ ಸರಿ. ಅವರು

ಈಗ ತೀರಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಕೇತೋಹಳ್ಳಿ ಶಾನುಭೋಗ ವೆಂಕಟಗಿರಿಯಪ್ಪ ಇವರ ಬಗ್ಗೆ ನನಗೆ ಗೊತ್ತಿಲ್ಲ. ಸಬ್ ರಿಜಿಸ್ಟ್ರರ್ ರವರು ನಿ ಡಿ 1 ದೃಢೀಕೃತ ಪ್ರತಿಯನ್ನು ಪಡೆದುಕೊಳ್ಳಲು ಅರ್ಜಿ ಕೊಟ್ಟಾಗ ನಮಗೆ ಯಾವುದೆ ಹಿಂಬರಹ ಕೊಟ್ಟಿಲ್ಲ. ದಿನಾಂಕ ಃ 06.09.2022 ರಂದು 2ನೆ ಐಟಂ ಸ್ವತ್ತಿನ ಕ್ರಯಪತ್ರದ ದೃಢೀಕೃತ ಪ್ರತಿಯನ್ನು 6 ನೆ ಪ್ರತಿವಾದಿ ಪಡೆದುಕೊಂಡಿದ್ದಾರೆ ಎಂದರೆ ಸರಿ.

ನಿ ಪಿ 4 ಮತ್ತು ನಿ ಪಿ 5 ರಲ್ಲಿ ಶಿವರುದ್ರಯ್ಯ ಇವರ ಹೆಸರಿದೆ ಎಂದರೆ ಸರಿ. 1982-83 ರವರೆಗೆ ಪಹಣಿಯಲ್ಲಿ ಅವರ ಹೆಸರು ಬರುತ್ತಿತ್ತು ಎಂದರೆ ಸರಿಯಲ್ಲ. ಅದರಲ್ಲಿ ನಮ್ಮ ತಂದೆಯ ಹೆಸರು ಸಹ ಬರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. 1983-1984 ರಿಂದ ಈಚೆಗೆ 6 ನೆ ಪ್ರತಿವಾದಿಯ ಹೆಸರು ಬರುತ್ತಿದೆ ಎಂದರೆ ಸರಿ. ಅದರ ಜೊತೆಗೆ ನಮ್ಮ ತಂದೆಯ ಹೆಸರು ಬರುತ್ತದೆ ಎಂದು ಸಾಕ್ಷಿ ಹೇಳುತ್ತಾರೆ. ಸಾಕ್ಷಿ ಪುನಃ ಹೇಳುತ್ತಾರೆ ಅವರ ಹೆಸರು ಬರುತ್ತಿದೆ ನಾವು ತಡೆಯಾಜ್ಞೆ ತೆಗೆದುಕೊಂಡಿದ್ದೇವೆ. ನಾವು ಹಾಕಿರುವ ಅರ್ಜಿ ವಜಾವಾಗಿದೆ ಎಂದರೆ ಸರಿಯಲ್ಲ, ನಮ್ಮ ಲಾಯರ್ ನ್ನು ಕೇಳಿದಾಗ ಅವರು ಇನ್ನು ಪೇಡಿಂಗ್ ಇದೆ ಎಂದು ಹೇಳಿರುತ್ತಾರೆ. ದಾವಾ ಐಟಂ ನಂಬರ್ 1 ಮತ್ತು 2 ರಲ್ಲಿ ನಮಗೆ ಯಾವುದೆ ಹಕ್ಕು ಮತ್ತು ಅಧಿಕಾರ ಇಲ್ಲ ಎಂದರೆ ಸರಿಯಲ್ಲ. ಹಕ್ಕು ಇದೆ ಎಂದು ತೋರಿಸಲು ನಾನು ಯಾವುದೆ ದಾಖಲೆ ಕೊಟ್ಟಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ ನಂಬರ್ 1 ರಿಂದ 3 ಇವುಗಳಲ್ಲಿ 6 ನೆ ಪ್ರತಿವಾದಿ ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಅದರಲ್ಲಿ ಮನೆ ಕಟ್ಟಿಕೊಂಡಿದ್ದಾರೆ ಎಂದರೆ ಸಾಕ್ಷಿ ಕೇಸ್ ಹಾಕಿದ ನಂತರ ಕಟ್ಟಿಕೊಂಡಿದ್ದಾರೆ ಎಂದು ಹೇಳುತ್ತಾರೆ. ದಾವಾ ಐಟಂ ನಂಬರ್ 1 ಮತ್ತು 2 ರಲ್ಲಿ 6 ನೆ ಪ್ರತಿವಾದಿಯ ತಂದೆ ತಾಯಿಗಳ ಸಮಾಧಿ ಇವೆ ಎಂದರೆ ಸರಿಯಲ್ಲ. ಅದರ ಪಕ್ಕದಲ್ಲಿ ಇರುವ ಅವರ ಸ್ವಂತ ಜಮೀನಿನಲ್ಲಿವೆ. ಒಂದು ಸುಳ್ಳು ಪ್ರಮಾಣಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**

**ಮಾಗಡಿ.**